UASB LIBRARY
Jai Kisan
Agri Newspaper Clippings
Monday 06-11-2023
Pg. 1

vittasuggi@gmail.com
ವಿತ್ತವಾಣಿ
ಮನೆ ಮನೆಯ ಮನಿಮಾತು
ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI BENGALURU
6
ಸೋಮವಾರ 6 ನವೆಂಬರ್ 2023
6 NOVEMBER 2023

ಹಲವರ ದಿನಚರಿ ಪ್ರಾರಂಭವಾಗುವುದೇ ಟೀ ಮತ್ತು ಕಾಫಿಯಿಂದ. ಜನರ ಟೆನ್ಶನ್ ಫ್ರೀ ಮಾಡುವ ಕಾಫಿಯನ್ನು ಬೆಳೆಯುವ ಬೆಳೆಗಾರರಿಗೇ ಟೆನ್ಶನ್ ಹೆಚ್ಚಾಗಿದೆ. ಅರೇಬಿಕಾ ಕಾಫಿ ಬೆಳೆಗೆ ಮಾರುಕಟ್ಟೆಯಲ್ಲಿ ತಕ್ಕ ಧಾರಣೆ ಸಿಗದೆ ಜೇಬಿಗೆ ಕತ್ತರಿ ಬಿದ್ದಿದೆ.

ಕಾಂತರಾಜ್ ಹೊನ್ನೇಕೋಡಿ ಸಕಲೇಶಪುರ



ಅರೇಬಿಕಾ ದರ ಕುಸಿತ ಬೆಳೆಗಾರರಲ್ಲಿ ಆತಂಕ

ಮಾರುಕಟ್ಟೆ ಆರಂಭವಾಗುವ ಹೊತ್ತಿನಲ್ಲೇ ಅರೇಬಿಕಾ ಕಾಫಿ ಧಾರಣೆ ಕುಸಿದಿರುವುದು ಬೆಳೆಗಾರರಲ್ಲಿ ಆತಂಕ ಮೂಡಿಸಿದೆ. ಈಗಾಗಲೆ ಸಕಲೇಶಪುರ ತಾಲೂಕಿನ ಹಲವೆಡೆ ಅರೇಬಿಕಾ ಕಾಫಿ ಕೊಯ್ಲು ಆರಂಭವಾಗಿದ್ದು, ಮಾರುಕಟ್ಟೆಗೆ ಇನ್ನೇನು ಆವಕವಾಗಲಿದೆ. ಆದರೆ, ಕಾಫಿ ಧಾರಣೆ ತೀವ್ರ ಪ್ರಮಾಣದಲ್ಲಿ ಕುಸಿಯುತ್ತಿರುವುದು ಬೆಳೆಗಾರರನ್ನು ಚಿಂತೆಗೆ ದೂಡಿದೆ. ಸಾಮಾನ್ಯವಾಗಿ ಆಗಸ್ಟ್ ಅಂತ್ಯದಿಂದಲೇ ಕೊಯ್ಲು ಆರಂಭವಾಗಿ ಅಕ್ಟೋಬರ್‌ನಲ್ಲಿ ವೇಗ ಪಡೆದು, ನವೆಂಬರ್ ಮೊದಲ ವಾರದೊಳಗೆ ಹೆಚ್ಚಿನ ಪ್ರಮಾಣದಲ್ಲಿ ಕಾಫಿ ಮಾರುಕಟ್ಟೆ ಪ್ರವೇಶಿಸುತ್ತದೆ. ಕಳೆದ ಜೂನ್‌ನಲ್ಲಿ 50 ಕೆಜಿ ಅರೇಬಿಕಾ ಚರಿ ಧಾರಣೆ 8,000 ದಿಂದ 8,500 ರೂ.ಗೆ ಸ್ಥಿರಗೊಂಡಿದ್ದರೆ, ಪಾರ್ಚ್‌ಮೆಂಟ್ ಧಾರಣೆ 16 ಸಾವಿರ ರೂ. ತಲುಪಿತ್ತು. ಸದ್ಯ ಮಾರುಕಟ್ಟೆಯಲ್ಲಿ 50 ಕೆಜಿ ಅರೇಬಿಕಾ ಚರಿ ಧಾರಣೆ 6,500-7,000 ರೂ. ಆಗಿದ್ದರೆ, ಪಾರ್ಚ್‌ಮೆಂಟ್ ಧಾರಣೆ 10,500 ರಿಂದ 11,000 ರೂ.ವರೆಗೆ ಇದೆ. ಇದರಿಂದಾಗಿ ಪ್ರತಿ ಮೂಟೆ ಚರಿ ಕಾಫಿ ಬೆಲೆ 1,500 ರಿಂದ 2,000 ಸಾವಿರ ರೂ. ಕುಸಿತ ಕಂಡಿದ್ದರೆ ಅರೇಬಿಕಾ ಪಾರ್ಚ್‌ಮೆಂಟ್ ದರ ಬರೋಬ್ಬರಿ 4,500 ರಿಂದ 5,000 ರೂ. ಇಳಿಕೆಯಾಗಿದೆ.

ಕಾರಣವೇನು?: ಅರೇಬಿಕಾ ಕಾಫಿ ಹೆಚ್ಚು ಬೆಳೆಯುವ ಬ್ರೇಜಿಲ್‌ನಲ್ಲಿ ಈ ಬಾರಿ ಕಾಫಿ ಫಸಲು ಉತ್ತಮವಾಗಿದ್ದು, ಈಗಾಗಲೆ ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ ಎನ್ನಲಾಗುತ್ತಿದೆ. ಇದರಿಂದಾಗಿ ಕಾಫಿ ಬೆಲೆ ನಿಗದಿಪಡಿಸುವ ಲಂಡನ್ ಮಾರುಕಟ್ಟೆಯಲ್ಲಿ ಅರೇಬಿಕಾ ಬೆಲೆ ಕುಸಿದಿದೆ ಎಂಬುದು ಕಾಫಿ ವ್ಯಾಪಾರಿಗಳ ಮಾಹಿತಿ. ರೊಬಸ್ಟಾ ಕಾಫಿ ಬೆಳೆಗಿಂತ ಅರೇಬಿಕಾ ಬೆಳೆಯುವುದು ಸವಾಲಿನ ಕೆಲಸ. ಅತ್ಯಂತ ಕಡಿಮೆ ವೆಚ್ಚದಲ್ಲಿ ರೋಗಗಳಿಲ್ಲದೆ ನೂರಾರು ವರ್ಷ ಬದುಕುವ ರೊಬಸ್ಟಾ ಕಾಫಿ ಗಿಡಗಳನ್ನು ಸುಲಭವಾಗಿ ಬೆಳೆಯಬಹುದು. ಆದರೆ, ಅರೇಬಿಕಾ ಕಾಫಿ ಬೆಳೆಯುವುದು ಸುಲಭವಲ್ಲ. ನಿಗದಿತ ಕೆಲಸ ನಿರ್ಲಕ್ಷಿಸಿದರೆ ಮುಂದಿನ ವರ್ಷ ತೋಟಕ್ಕೆ ಕಾಲಿಡುವುದು ಅನವಶ್ಯಕ ಎಂಬಷ್ಟು ಸೂಕ್ಷ್ಮ ಬೆಳೆಯಾಗಿರುವ ಅರೇಬಿಕಾ ಕೇವಲ ಎರಡು ದಶಕದ ಬೆಳೆ. ಆದರೂ, ಅರೇಬಿಕಾ ಕಾಫಿ ಬಗ್ಗೆ ಇದರ ಹೆಚ್ಚಿನ ಧಾರಣೆಯಿಂದಾಗಿ ಕಾಫಿ ಬೆಳೆಗಾರರಿಗೆ ಅಚ್ಚುಮೆಚ್ಚು.

ಏರಿಳಿತ ಕಾಣದ ರೊಬಸ್ಟಾ

ಅರೇಬಿಕಾ ಕಾಫಿಗೆ ಹೋಲಿಸಿದರೆ ರೊಬಸ್ಟಾ ಕಾಫಿ ಧಾರಣೆಯಲ್ಲಿ ಹೆಚ್ಚಿನ ಏರಿಳಿತವಾಗಿಲ್ಲ. ಕಾಫಿ ಮಾರುಕಟ್ಟೆ ಮುಕ್ತಾಯದ ಹಂತದಲ್ಲಿ 50 ಕೆಜಿ ರೊಬಸ್ಟಾ ಪಾರ್ಚ್‌ಮೆಂಟ್ ಧಾರಣೆ 6,500 ರೂ. ಇದ್ದರೆ ಪ್ರಸಕ್ತ 5,800 ರಿಂದ 6,200 ರೂ. ವರೆಗೆ ದರವಿದೆ. ಸದ್ಯ ರೊಬಸ್ಟಾ ಕಾಫಿ ಮಾರುಕಟ್ಟೆ ಪ್ರವೇಶಕ್ಕೆ ಇನ್ನೂ ಎರಡು ತಿಂಗಳ ಕಾಲಾವಕಾಶವಿದ್ದು, ಹಳೆಯ ಕಾಫಿ ಮಾತ್ರ ಮಾರುಕಟ್ಟೆಗೆ ಅಲ್ಲಲ್ಲಿ ಪ್ರವೇಶಿಸುತ್ತಿದೆ.



ಅಧಿಕ ಮಳೆ ಬಿದ್ದರೆ ಹಾನಿ

ಸದ್ಯ ಅರೇಬಿಕಾ ಕಾಫಿ ಗಿಡದಲ್ಲಿ ಈಗಾಗಲೆ ಹಣ್ಣುಗಳು ಮೂಡುತ್ತಿದ್ದು, ಈಗ ಮಳೆಯಾದರೆ ಹಣ್ಣುಗಳು ನೆಲ ಸೇರುತ್ತವೆ ಎಂಬ ಭಯ ಬೆಳೆಗಾರರದ್ದು. ನಿರಂತರ ಮಳೆಯಾದರೆ ಕೊಳೆರೋಗ ತೋಟಗಳನ್ನು ಆವರಿಸಿ ಹೆಚ್ಚಿನ ಪ್ರಮಾಣದಲ್ಲಿ ಹಾನಿಯಾಗಲಿದೆ. ರೊಬಸ್ಟಾ ಕಾಫಿ ಕಾಯಿ ಇನ್ನೂ ಬೀಜ ಮೂಡುವ ಹಂತದಲ್ಲಿರುವುದರಿಂದ ಅತಿ ಬೇಗ ಕೊಳೆರೋಗ ಆವರಿಸುತ್ತದೆ. ಆದ್ದರಿಂದ, ಕೆಲ ದಿನಗಳ ಕಾಲ ಮಳೆಬೇಡ ಎಂಬುದು ಬೆಳೆಗಾರರ ಮಾತು.

ಹೆಚ್ಚು ಮಳೆಗೆ ಒಗ್ಗದು

ಹೆಚ್ಚು ಮಳೆ ಬೀಳುವ ಹೆತ್ತೂರು, ಯಸಳೂರು ಹಾಗೂ ಹಾನುಬಾಳ್ ಹೋಬಳಿಯ ಪಶ್ಚಿಮಘಟ್ಟದ ತೋಟಗಳಲ್ಲಿ ಅರೇಬಿಕಾ ಕಾಫಿ ದುಬಾರಿ. ಬೆಳೆದರೂ ನಿರೀಕ್ಷಿಸಿದಷ್ಟು ಇಳುವರಿ ಬಾರದಿರುವುದರಿಂದ ಅರೇಬಿಕಾ ಕಾಫಿ ಬಗ್ಗೆ ಆಕ್ಕರೆ ಇದ್ದರೂ ಅನಿವಾರ್ಯವಾಗಿ ಹೆಚ್ಚಿನ ಶೀತ ತಡೆಯುವ ಶಕ್ತಿ ಹೊಂದಿರುವ ರೊಬಸ್ಟಾ ಶೇ.98 ಪ್ರದೇಶವನ್ನು ಆವರಿಸಿದೆ. ತಾಲೂಕಿನಲ್ಲಿ ಕಡಿಮೆ ಮಳೆ ಬೀಳುವ ಬೆಳಗೋಡು ಹೋಬಳಿಯಲ್ಲಿ ಅರೇಬಿಕಾ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತಿದೆ.

ದುಷ್ಪಟ್ಟು ದರ ಸಿಕ್ಕಿತ್ತು

ಕಳೆದ 2 ವರ್ಷದಲ್ಲಿ ರೊಬಸ್ಟಾ ಕಾಫಿಗೆ ಹೋಲಿಕೆ ಮಾಡಿದರೆ ಅರೇಬಿಕಾ ಕಾಫಿ ಧಾರಣೆ ದುಪ್ಪಟ್ಟಿತ್ತು. ಅರೇಬಿಕಾ ಪಾರ್ಚ್‌ಮೆಂಟ್ ದರ 16,500 ರೂ. ತಲುಪಿದ್ದ ವೇಳೆ ರೊಬಸ್ಟಾ ಪಾರ್ಚ್‌ಮೆಂಟ್ ದರ 8ರಿಂದ 9 ಸಾವಿರ ರೂ. ಆಸುಪಾಸಿನಲ್ಲಿತ್ತು. ಇದರಿಂದಾಗಿ ಸಾಕಷ್ಟು ಬೆಳೆಗಾರರು ಅರೇಬಿಕಾ ಕಾಫಿ ಬೆಲೆಗೆ ಮಾರುಹೋಗಿ ರೊಬಸ್ಟಾ ಕಾಫಿ ತೋಟಗಳನ್ನು ನಾಶಪಡಿಸಿ ಅರೇಬಿಕಾ ತೋಟಗಳನ್ನಾಗಿ ಮಾರ್ಪಡಿಸಿದಂತಹ ನಿದರ್ಶನಗಳು ತಾಲೂಕಿನಲ್ಲಿ ಕಂಡುಬಂದಿದ್ದವು.



"ಲಂಡನ್ ಮಾರುಕಟ್ಟೆಯಲ್ಲಿನ ದರ ಇಳಿಕೆ ಸದ್ಯ ಸ್ಥಳೀಯ ಮಾರುಕಟ್ಟೆಗೂ ತಟ್ಟಿದೆ. ಹಾಗಾಗಿ ಅರೇಬಿಕಾ ಕಾಫಿ ದರ ಇಳಿಕೆಯಾಗಿದೆ ಎನ್ನಲಾಗಿದೆ.

ನಡಹಳ್ಳಿ ಕುಮಾರ್
ಕಾಫಿ ವ್ಯಾಪಾರಿ



"ಸದ್ಯ ತಾಲೂಕಿನ ಅಲ್ಲಲ್ಲಿ ಅರೇಬಿಕಾ ಕಾಫಿ ಕೊಯ್ಲು ಆರಂಭವಾಗಿದೆ. ಕಾಫಿ ಮಾರುಕಟ್ಟೆ ಪ್ರವೇಶಿಸುವ ವೇಳೆ ಬೆಲೆ ಭಾರಿ ಪ್ರಮಾಣದಲ್ಲಿ ಕುಸಿದಿರುವುದರಿಂದ ಸದ್ಯ ಕಾಫಿ ಮಾರಾಟ ಮಾಡಲು ತೊಂದರೆಯಾಗಿದೆ.

ಕಾರ್ತಿಕ್ ಕಾಫಿ ಬೆಳೆಗಾರ, ಬ್ಯಾಕರವಳ್ಳಿ

ವಿ ರೈತ ಮಿತ್ರ

■ ಶುಂಠಿ ಬೆಳೆಯಲ್ಲಿ ಪೋಷಕಾಂಶ ನಿರ್ವಹಣೆ ಹೇಗೆ?

ಗೋವಿಂದಪ್ಪ ಹೊಸಕೋಟೆ

ಇತ್ತೀಚಿನ ದಿನಗಳಲ್ಲಿ ರೈತರು ಹೆಚ್ಚಿನ ಇಳುವರಿ ಕೊಡುವ ಸುಧಾರಿತ ಶುಂಠಿ ತಳಿಗಳನ್ನು ಬೆಳೆಯುತ್ತಿದ್ದಾರೆ. ಶುಂಠಿ ಬೆಳೆಗೆ ಹೆಚ್ಚಿನ ಪ್ರಮಾಣದ ಪೋಷಕಾಂಶ ಬೇಕಿರುವುದರಿಂದ ಪ್ರಧಾನ ಪೋಷಕಾಂಶಗಳನ್ನಲ್ಲದೆ, ಲಘು ಪೋಷಕಾಂಶಗಳನ್ನೂ ನೀಡಬೇಕಾಗುತ್ತದೆ. ಲಘು ಪೋಷಕಾಂಶಗಳ ಕೊರತೆ ಕಂಡು ಬಂದಾಗ ಈ ಬೆಳೆಯಲ್ಲಿ ಎಲೆಗಳು ಹಳದಿ ಬಣ್ಣಕ್ಕೆ ತಿರುಗುತ್ತವೆ. ಎಲೆಯ ತುದಿ ಮತ್ತು ಅಂಚುಗಳು ಸುತ್ತಿಕೊಳ್ಳುತ್ತವೆ. ಕಾಂಡದ ಗೆಣ್ಣುಗಳ ನಡುವಿನ ಅಂತರ ಕಡಿಮೆಯಾಗುವುದಲ್ಲದೆ, ಇಳುವರಿ ಸಹ ಕುಂಠಿತಗೊಳ್ಳುತ್ತದೆ.

ನಿರ್ವಹಣೆ: ಈ ಬೆಳೆಗೆ ಎಕರೆಗೆ 10 ಟನ್ ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್ 200 ಕಿ.ಗ್ರಾಂ ಬೇವಿನ ಹಿಂಡಿ, ರಸಾಯನಿಕ ಗೊಬ್ಬರಗಳಾದ ಸಾರಜನಕ:ರಂಜಕ: ಪೊಟ್ಯಾಷ್-100:50:50 ಕಿ.ಗ್ರಾಂ ನೀಡುವುದು. ಲಘು ಪೋಷಕಾಂಶಗಳ ಕೊರತೆ ನೀಗಿಸಲು ಭಾರತೀಯ ಸಾಂಬಾರು ಬೆಳೆಗಳ ಸಂಶೋಧನಾ ಸಂಸ್ಥೆ, ಕ್ಯಾಲಿಕಟ್, ಕೇರಳ ಇವರು ಅಭಿವೃದ್ಧಿಪಡಿಸಿರುವ ಶುಂಠಿ ಸ್ಪೆಷಲ್ ಅನ್ನು ಸಿಂಪಡಿಸುವುದು. ಈ ಲಘು ಪೋಷಕಾಂಶಗಳ ಮಿಶ್ರಣದ ಮೊದಲನೇ ಸಿಂಪಡಣೆ ನಾಟಿ ಮಾಡಿದ 30-45 ದಿನಗಳ ನಂತರ ಮಾಡುವುದು. ಆನಂತರ ಪ್ರತಿ 45 ದಿನಕೊಮ್ಮೆ ಬೆಳೆಯನ್ನು 6 ತಿಂಗಳಾಗುವವರೆಗೆ ಪುನಾರಾವರ್ತಿಸಬೇಕು.

ಡಾ. ಶಾಲಿನಿ ಎಂ., ತೋಟಗಾರಿಕೆ ತಜ್ಞರು

■ ಹಸಿರು ಮನೆಯಲ್ಲಿ ಜರ್ಬೆರಾ ಬೆಳೆಯಲ್ಲಿ ಬೇರು ಕೊಳೆಯುತ್ತಿದ್ದು, ಇದರ ನಿಯಂತ್ರಣ ಹೇಗೆ?

ಅಮರ್ ದೊಡ್ಡಬಳ್ಳಾಪುರ

ಜರ್ಬೆರಾ ಬೆಳೆಯಲ್ಲಿ ರೋಗಕ್ಕೆ ತುತ್ತಾದ ಗಿಡಗಳು ಮೊದಲಿಗೆ ಹಳದಿಯಾಗಿ ಕಂಡು, ನಂತರ ಕಪ್ಪು-ಕಂದು ಬಣ್ಣಕ್ಕೆ ತಿರುಗುತ್ತವೆ. ಕೊನೆಗೆ ಗಿಡ ಸಾಯುತ್ತವೆ.

ನಿರ್ವಹಣೆ: ಗಿಡಗಳು ಹಳದಿ ಬಣ್ಣಕ್ಕೆ ತಿರುಗಿದಾಗ ಪ್ರತಿ ಲೀಟರ್ ನೀರಿನಲ್ಲಿ 2 ಗ್ರಾಂ ಮೆಟಲಾಕ್ಸಿಲ್ ಎಮ್. ಜೆಡ್. 72 + ಮ್ಯಾಂಕೊಜೆಬ್ ಅಥವಾ ಕ್ಯಾಪ್ಟಾನ್ 80 ಡಬ್ಲ್ಯು.ಪಿ. ಬೆರೆಸಿದ ದ್ರಾವಣದಿಂದ ಗಿಡದ ಸುತ್ತಲೂ ನೆನೆಸಬೇಕು.

ಪ್ರಿಯಾಂಕಾ ಬಿ., ಸಸ್ಯರೋಗ ತಜ್ಞರು

■ ನೆಲಗಡಲೆ ಕಾಯಿ ಸಂಗ್ರಹಣೆ ಹಂತದಲ್ಲಿ ಹುಳುಗಳು ತಿಂದು ನಾಶಮಾಡುತ್ತಿವೆ. ಇದನ್ನು ನಿಯಂತ್ರಿಸುವುದು ಹೇಗೆ?

ಶಂಕರಪ್ಪ ಚಿಂತಾಮಣಿ



ನೆಲಗಡಲೆಯಲ್ಲಿ ಕಾಯಿ ಕೊರೆಯುವ ದುಂಬಿಯಿಂದಾಗುವ ಪ್ರಾಥಮಿಕ ಹಾನಿಯ ಲಕ್ಷಣಗಳು ಅಷ್ಟಾಗಿ ಗೋಚರವಾಗುವುದಿಲ್ಲ. ಕಡಲೆಕಾಯಿ ಕಟಾವು ಮಾಡಿ ಹೊಲದಲ್ಲಿಯೇ ಕೆಲ ಕಾಲ ಬಿಟ್ಟಾಗ ಹುಳು ಸೂಕ್ಷ್ಮವಾಗಿ ಕಾಯಿಗಳನ್ನು ಕೊರೆದು ಬೀಜವನ್ನು ತಿಂದು, ಕೋಶಾವಸ್ಥೆಗೆ ಹೋಗಿ ಹೊರ ಬಂದಾಗ ಅಂತಹ ಕಾಯಿಗಳ ಮೇಲೆ ರಂಧ್ರ ಕಾಣಬಹುದು.

ನಿರ್ವಹಣೆ: ನೆಲಗಡಲೆ ಕಾಯಿ ಸಂಗ್ರಹಿಸುವ ಎಚ್ .ಡಿ.ಪಿ.ಇ ಚೀಲಗಳ ಮೇಲೆ 3.5 ಮಿ.ಲೀ. ಡೆಲ್ಟಾಮೆಥ್ರಿನ್ 2.8 ಇ.ಸಿ. ಅಥವಾ 0.2 ಮಿ.ಲೀ. ಸ್ಪೈನೋಸಾಡ್ 45 ಎಸ್. ಸಿ. ಪ್ರತೀ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಚೀಲಗಳನ್ನು ನೆರಳಿನಲ್ಲಿ ಒಣಗಿಸಿ ಕಾಯಿಗಳನ್ನು ಅಂತಹ ಚೀಲಗಳಲ್ಲಿ ಸಂಗ್ರಹಿಸುವುದರಿಂದ ಒಂಬತ್ತು ತಿಂಗಳವರೆಗೂ ಉಗ್ರಾಣದಲ್ಲಿ ಕೀಟಗಳ ಹಾವಳಿ ಮತ್ತು ಬೀಜದ ಗುಣ ಧರ್ಮಗಳಿಗೆ ಹಾನಿಯಾಗದಂತೆ ಸಂರಕ್ಷಿಸಬಹುದು. ಬಿತ್ತನೆ ಸಮಯದಲ್ಲಿ 0.4 ಮಿ.ಲೀ ಡೆಲ್ಟಾಮೆಥ್ರಿನ್ 2.8 ಇ.ಸಿ ಅಥವಾ 0.4 ಮಿ.ಲೀ ಸ್ಪೈನೋಸಾಡ್ 45 ಎಸ್.ಪಿಯನ್ನು 150 ಮಿ.ಲೀ. ನೀರಿನಲ್ಲಿ ಬೆರೆಸಿ, 10 ಕೆ.ಜಿ ಬೀಜಗಳಿಗೆ ಲೇಪನ ಮಾಡಿ ನೆರಳಿನಲ್ಲಿ ಒಣಗಿಸಿ ಬಿತ್ತನೆ ಮಾಡಿ.

ಡಾ. ಬಿ.ಎಸ್. ರಾಜೇಂದ್ರ ಪ್ರಸಾದ್ ಕೀಟಶಾಸ್ತ್ರ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಪ್ರತಿ ಸೋಮವಾರ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ.

06-11-2023
Kannadaprabha Pg 01

ಆಹಾರ ಉತ್ಪಾದನೆ ಅರ್ಧಕ್ಕರ್ಧ ಕುಸಿತ!

ಮಳೆ ಕೊರತೆ: ಮುಂಗಾರಲ್ಲಿ ಇಳುವರಿ ಕುಂಠಿತ | ಆಹಾರ ಧಾನ್ಯ ಬೆಲೆ ಏರಿಕೆ ಸಾಧ್ಯತೆ

• ಸಿದ್ದು ಚಿಕ್ಕಬಳ್ಳೇಕೆರೆ

ಕನ್ನಡಪ್ರಭ ವಾರ್ತೆ ಬೆಂಗಳೂರು

ರಾಜ್ಯದಲ್ಲಿ ಸಕಾಲಕ್ಕೆ ಮಳೆ ಆಗದಿರುವುದರಿಂದ ವ್ಯಾಪಕ ಬೆಳೆ ಹಾನಿ ಆಗಿದ್ದು, ಜೊತೆಗೆ ಇಳುವರಿಯೂ ಕಡಿಮೆ ಆಗುವುದರಿಂದ ಈ ವರ್ಷ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಅರ್ಧಕ್ಕೂ ಅಧಿಕ ಕುಂಠಿತವಾಗಲಿದೆ.

ಇದರಿಂದ ಮುಂದಿನ ದಿನಗಳಲ್ಲಿ ಗ್ರಾಹಕರಿಗೆ ಬೆಲೆ ಏರಿಕೆ ಬಿಸಿಯೂ ತಟ್ಟುವುದು ಬಹುತೇಕ ಖಚಿತವಾಗಿದೆ.

ಪ್ರಸಕ್ತ 2023ರ ಮುಂಗಾರು ಹಂಗಾಮಿನಲ್ಲಿ ಕೃಷಿ ಇಲಾಖೆಯು 82.35 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಗುರಿ ಹೊಂದಿತ್ತಾದರೂ 74.32 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿತ್ತು. ಸಕಾಲಕ್ಕೆ ಮಳೆ ಆಗದೆ ಬರ ಉಂಟಾಗಿದ್ದು, ಆಹಾರ ಧಾನ್ಯಗಳ ಇಳುವರಿ ಭಾರೀ ಕುಂಠಿತವಾಗಲಿದೆ.



- 2023ರ ಮುಂಗಾರು ಹಂಗಾಮಿನಲ್ಲಿ 82.35 ಲಕ್ಷ ಹೆಕ್ಟೇರ್ ಬಿತ್ತನೆ ಗುರಿ
- 74.32 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ. ಸಕಾಲಕ್ಕೆ ಮಳೆ ಬಾರದ್ದರಿಂದ ಸಮಸ್ಯೆ
- ಮತ್ತೊಂದೆಡೆ ಬೆಳೆದ ಬೆಳೆಗಳು ಹಸಿರಾಗಿದ್ದರೂ ಕಾಳು ಕಟ್ಟದೆ ತೊಂದರೆ
- ಮೆಕ್ಕೆಜೋಳ, ರಾಗಿ, ಭತ್ತ ಸೇರಿದಂತೆ 43 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆ ಹಾನಿ
- ಇದರಿಂದಾಗಿ ರಾಜ್ಯದ ಆಹಾರ ಧಾನ್ಯಗಳ ಇಳುವರಿಯಲ್ಲಿ ಭಾರಿ ಕುಂಠಿತ

ಮುಂಗಾರಿನಲ್ಲಿ 96.56 ಲಕ್ಷ ಟನ್ ಏಕದಳ ಧಾನ್ಯ, 15.36 ಲಕ್ಷ ಟನ್ ದ್ವಿದಳ ಧಾನ್ಯ, 9.89 ಲಕ್ಷ ಟನ್ ಎಣ್ಣೆಕಾಳುಗಳ ಉತ್ಪಾದನೆ ಆಗಬಹುದು ಎಂದು ಕೃಷಿ ಇಲಾಖೆ ಅಂದಾಜಿಸಿತ್ತಾದರೂ ಕೇವಲ 58 ಲಕ್ಷ ಟನ್ ಉತ್ಪಾದನೆ ಆಗುವ ಸಾಧ್ಯತೆ ಇದೆ. ಸಮಯಕ್ಕೆ ಸರಿಯಾಗಿ ಮಳೆ ಬಾರದೆ ಬಿತ್ತನೆ ಕುಂಠಿತವಾಗಿರುವುದು ಒಂದೆಡೆಯಾದರೆ, ಮತ್ತೊಂದೆಡೆ ಬೆಳೆದ ಬೆಳೆಗಳು ಹಸಿರುಮಯವಾಗಿ ಕಾಣಿಸುತ್ತವೆಯಾದರೂ ಕಾಳು ಕಟ್ಟದೆ ಇಳುವರಿ ಭಾರೀ ಕಡಿಮೆಯಾಗಲಿದೆ.



ಬಿತ್ತನೆ ತೀರಾ ಕಮ್ಮಿ ಆಗಿಲ್ಲ, ಆದರೆ ಇಳುವರಿ ಹೆಚ್ಚುತ್ತಿಲ್ಲ

ಮುಂಗಾರು ಹಂಗಾಮಿನಲ್ಲಿ ಬಿತ್ತನೆ ಪ್ರಮಾಣ ತೀರಾ ಕಡಿಮೆಯೇನೂ ಆಗಿರಲಿಲ್ಲ. ಆದರೆ, ಮಳೆ ಅಭಾವದಿಂದ ಯಾವ ಬೆಳೆಯಲ್ಲೂ ಹೆಚ್ಚು ಇಳುವರಿ ಕಂಡುಬರುತ್ತಿಲ್ಲ. ಇದೇ ಪ್ರಮುಖ ಸಮಸ್ಯೆಯಾಗಿದೆ.

• ಚಲುವರಾಯಸ್ವಾಮಿ ಕೃಷಿ ಸಚಿವ

06-11-2023
Viswavani add Pg 04



• ಬಿಂ. ಮು. ಮಾರುತಿ

ಚಿನ ಭಾರತೀಯ ಮನೆಗಳಲ್ಲಿ ಚಹಾವು ಒಂದು ಪ್ರಮುಖ ಅಂಶವಾಗಿದೆ. ಏಕೆಂದರೆ ಬಹುತೇಕರಿಗೆ ಬಿಸಿ ಚಹಾ ಇಲ್ಲದೆ ತಮ್ಮ ದಿನವನ್ನು ಪ್ರಾರಂಭಿಸಲು ಸಾಧ್ಯವಿಲ್ಲ. ಹಾಗಂತ ಹಾಲು ಹಾಕಿದ ಟೀಯನ್ನು ಬಳಸುವುದು ಆರೋಗ್ಯಕರವಲ್ಲ. ಇದಕ್ಕೆ ಪರ್ಯಾಯವಾಗಿ ಕಪ್ಪು ಚಹಾ ಬಳಸುವುದು ಉತ್ತಮ. ಕಪ್ಪು ಚಹಾದಲ್ಲಿ ಉತ್ಕರ್ಷಣ ನಿರೋಧಕಗಳು, ಟ್ಯಾನಿನ್‌ಗಳು, ಫ್ಲೆವೊನಾಯ್ಡ್‌ಗಳು ಮತ್ತು ಹಲವಾರು ಪೋಷಕಾಂಶಗಳು ಸಮೃದ್ಧವಾಗಿದೆ. ನೀವು ಖಾಲಿ ಹೊಟ್ಟೆಯಲ್ಲಿ ಕಪ್ಪು ಚಹಾವನ್ನು ಸೇವಿಸಿದರೆ, ಕೆಳಗೆ ವಿವರಿಸಿದಂತ ಕೆಲವು ಆರೋಗ್ಯ ಪ್ರಯೋಜನಗಳು ಖಚಿತ.



ಬಲವಾದ ರೋಗನಿರೋಧಕ ಶಕ್ತಿ

ನಮಗೆಲ್ಲರಿಗೂ ತಿಳಿದಿರುವಂತೆ, ವರ್ಷದ ಈ ಸಮಯದಲ್ಲಿ ನಮ್ಮ ರೋಗನಿರೋಧಕ ಶಕ್ತಿಯು ಕಡಿಮೆಯಾಗುವುದರಿಂದ ಆರೋಗ್ಯ ಬೇಗನೆ ಹದೆಗೆಡುತ್ತದೆ. ಹಾಗೆಯೇ ಕಲುಷಿತ ನಗರಗಳಲ್ಲಿ ವಾಸಿಸುತ್ತಿದ್ದರೆ, ಪರಿಸ್ಥಿತಿ ಇನ್ನೂ ಕೆಟ್ಟದಾಗಿರುತ್ತದೆ. ಹಾಗಾಗಿ ಎಲ್ಲಾ ರೀತಿಯಲ್ಲಿ ನಮ್ಮ ರೋಗನಿರೋಧಕ ಶಕ್ತಿಯನ್ನು ಬಲಪಡಿಸುವುದು ಬಹಳ ಮುಖ್ಯ. ಕಪ್ಪು ಚಹಾವು ಉತ್ಕರ್ಷಣ ನಿರೋಧಕಗಳಲ್ಲಿ ಸಮೃದ್ಧವಾಗಿರುವುದರಿಂದ, ದೇಹದ ರಕ್ಷಣಾ ವ್ಯವಸ್ಥೆಯನ್ನು ಹೆಚ್ಚಿಸಲು ಇದು ಉಪಯುಕ್ತವಾಗಿದೆ. ಋತುಮಾನದ ಸೋಂಕುಗಳು, ಅಲರ್ಜಿಗಳು ಮತ್ತು ಜ್ವರವನ್ನು ತಡೆಯುವುದರ ಜತೆಗೆ ಮನಸ್ಸಿಗೆ ಆಹ್ಲಾದಕರವನ್ನುಂಟು ಮಾಡುತ್ತದೆ.

ಹೃದಯದ ಆರೋಗ್ಯದಲ್ಲಿ ಸುಧಾರಣೆ

ಹೃದ್ರೋಗ, ಅಧಿಕ ರಕ್ತದೊತ್ತಡ ಅಥವಾ ಅಧಿಕ ಕೊಲೆಸ್ಟರಾಲ್ ಅಥವಾ ಯಾವುದೇ ಇತರ ಹೃದಯದ ರಕ್ತನಾಳದ ಸಮಸ್ಯೆಗಳನ್ನು ಹೊಂದಿದ್ದರೆ, ಬೆಳಗ್ಗಿನ ಸಮಯ ಕಪ್ಪು ಚಹಾ ಬಳಸಿ. ಕಪ್ಪು ಚಹಾ ಎಲೆಗಳಲ್ಲಿ ಹೇರಳವಾಗಿರುವ ಉತ್ಕರ್ಷಣ ನಿರೋಧಕಗಳು ಹೃದಯದ ಆರೋಗ್ಯಕ್ಕೆ ಒಳ್ಳೆಯದು. ಇವು ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡುತ್ತದೆ, ರಕ್ತದೊತ್ತಡವನ್ನು ನಿಯಂತ್ರಿಸುತ್ತದೆ ಮತ್ತು ಭವಿಷ್ಯದಲ್ಲಿ ಹೃದಯ ಕಾಯಿಲೆಗಳನ್ನು ಅಭಿವೃದ್ಧಿಪಡಿಸುವ ಅಪಾಯವನ್ನು ಕಡಿಮೆ ಮಾಡುತ್ತದೆ. ಉತ್ತಮ ಪ್ರಯೋಜನಗಳಿಗಾಗಿ, ದಿನಕ್ಕೆ ಎರಡು ಬಾರಿ ಕಪ್ಪು ಚಹಾವನ್ನು ಸೇವಿಸುವುದರಿಂದ ನಷ್ಟವೇನಿಲ್ಲ.

For more information visit
University Library Website
Web - uasbagrilibindia.org
E-mail- librarian@uasbangalore.edu.in